ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.

www.anekal.tpa.gov.in, www.e-vinyasa.kar.nic.in

## "ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನಾ ಪತ್ರ"

ಸಂಖ್ಯೆ:ಆಯೋಪ್ರಾ/ಎಲ್ಎಓ/70/2021-22 ದಿನಾಂಕ: 15 JUN 2022

**ವಿಷಯ :** ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಜೆ.ಬಿಂಗೀಪುರ ಗ್ರಾಮದ ಸ.ನಂ.29ರಲ್ಲಿನ 01ಎಕರೆ 01ಗುಂಟೆ ಅಥವಾ 4,148.01ಚ.ಮೀ. ವಿಸ್ತೀರ್ಣದ ಪ್ರದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17ರ ಅಡಿಯಲ್ಲಿ "ವಸತಿ" ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ :**
1) ಕಾರ್ಯಪಾಲಕ ಅಭಿಯಂತರರು, ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತ ರವರು ಸಲ್ಲಿಸಿರುವ ಅರ್ಜಿ ದಿನಾಂಕ:23.03.2022.
2) ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಆದೇಶ ಸಂಖ್ಯೆ:ಆರ್‌ಡಿ 19 ಎಲ್‌ಜಿಬಿ 2018, ದಿನಾಂಕ:19.03.2018.
3) ದಿನಾಂಕ:18.04.2022ರಂದು ನಡೆದ ಪ್ರಾಧಿಕಾರದ 78ನೇ ಸಭೆಯ ವಿಷಯ ಸಂಖ್ಯೆ:49ರ ನಡಾವಳಿ.
4) ಈ ಪ್ರಾಧಿಕಾರದ ಪತ್ರ ಸಂಖ್ಯೆ: ಆಯೋಪ್ರಾ/ಎಲ್ಎಓ/70/2021-22 ದಿನಾಂಕ:19.05.2022.
5) ಅರ್ಜಿದಾರರು ಪರಿಶೀಲನಾ, ಉಸ್ತುವಾರಿ ಮತ್ತು ನಕ್ಷೆ ಪ್ರತಿ ಶುಲ್ಕಗಳ ಒಟ್ಟು ರೂ.2,000/-, ಕೆರೆ ಪುನರುಜ್ಜೀವನ ಶುಲ್ಕ ರೂ.1,04,000/-ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿದ ರಶೀದಿ ಸಂಖ್ಯೆ:1463 ದಿನಾಂಕ:31.05.2022.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿನ ಅರ್ಜಿಯಲ್ಲಿ ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಜೆ.ಬಿಂಗೀಪುರ ಗ್ರಾಮದ ಸ.ನಂ.29ರಲ್ಲಿನ 01ಎಕರೆ 01ಗುಂಟೆ ಅಥವಾ 4,148.01ಚ.ಮೀ. ವಿಸ್ತೀರ್ಣದ ಪ್ರದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17ರ ಅಡಿಯಲ್ಲಿ "ವಸತಿ" ಉಪಯೋಗದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಲಾಗಿರುತ್ತದೆ.

ಪ್ರಶ್ನಿತ ಪ್ರದೇಶವು ಸರ್ಕಾರದಿಂದ ಅನುಮೋದಿತವಾಗಿರುವ ಮಹಾಯೋಜನೆಯಂತೆ ವಸತಿ ವಲಯದಲ್ಲಿ ಕಾಯ್ದಿರಿಸಲಾಗಿದೆ. ಉಲ್ಲೇಖ(2)ರಲ್ಲಿ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ರವರ ಆದೇಶ ಸಂಖ್ಯೆ:ಆರ್‌ಡಿ 19 ಎಲ್‌ಜಿಬಿ 2018, ದಿನಾಂಕ:19.03.2018ರಂತೆ "ಬೆಂಗಳೂರಿನಲ್ಲಿ ಒಂದು ಲಕ್ಷ ಬಹುಮಹಡಿ ವಸತಿ ಯೋಜನೆ"ಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22ಎ(3)(iii)ರ ಮೇರೆಗೆ ವಸತಿ ರಹಿತರ ವಸತಿ ಉದ್ದೇಶಕ್ಕೆ ಉಚಿತವಾಗಿ ಮಂಜೂರು ಮಾಡಿ ಆದೇಶಿಸಿದೆ. ಪ್ರಾಧಿಕಾರದಿಂದ ಕಡತದ ಸಂಖ್ಯೆ:ಆಯೋಪ್ರಾ:ಎಲ್ಎಓ:177:2013-14 ದಿನಾಂಕ:16.01.2015ರಂತೆ, ಅನುಮೋದನೆಯಾದ ವಸತಿ ವಿನ್ಯಾಸದಲ್ಲಿನ 12.00ಮೀ. ಅಗಲದ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ.

ಉಲ್ಲೇಖ(3)ರಲ್ಲಿನ ದಿನಾಂಕ:18.04.2022ರಂದು ನಡೆದ ಪ್ರಾಧಿಕಾರದ 78ನೇ ಸಭೆಯ ವಿಷಯ ಸಂಖ್ಯೆ:49ರ ನಡಾವಳಿಯಲ್ಲಿ ಸಲ್ಲಿಸಿರುವ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಯು ವಲಯ ನಿಯಮಾವಳಿಗಳಿಗೆ ಅನುಗುಣವಾಗಿದ್ದು, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಜೆ.ಬಿಂಗೀಪುರ ಗ್ರಾಮದ ಸ.ನಂ.29ರಲ್ಲಿನ 01ಎಕರೆ 01ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17ರ ಅಡಿಯಲ್ಲಿ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಯನ್ನು ಅನುಮೋದಿಸಲು ತೀರ್ಮಾನಿಸಲಾಗಿರುತ್ತದೆ. ಉಲ್ಲೇಖ(4)ರಲ್ಲಿ ನಿಗಧಿತ ಶುಲ್ಕಗಳನ್ನು ಪಾವತಿಸಲು ಅರ್ಜಿದಾರರಿಗೆ ತಿಳಿಸಲಾಗಿರುತ್ತದೆ. ಅದರಂತೆ, ಉಲ್ಲೇಖ(5)ರಲ್ಲಿ ಅರ್ಜಿದಾರರು ನಿಗಧಿತ ಶುಲ್ಕಗಳನ್ನು ಪಾವತಿಸಿರುತ್ತಾರೆ ಹಾಗೂ ನೀಲಿ ನಕ್ಷೆಗಳನ್ನು ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಜೆ.ಬಿಂಗೀಪುರ ಗ್ರಾಮದ ಸ.ನಂ.29ರಲ್ಲಿನ 01ಎಕರೆ 01ಗುಂಟೆ ಅಥವಾ 4,148.01ಚ.ಮೀ. ವಿಸ್ತೀರ್ಣದ ಪ್ರದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17ರ ಅಡಿಯಲ್ಲಿ "ವಸತಿ" ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಯನ್ನು ಈ ಕೆಳಕಂಡ ಷರತ್ತಿಗೆ ಒಳಪಟ್ಟು ಅನುಮೋದಿಸಲಾಗಿದೆ.

1. ಪ್ರಸ್ತಾವಿತ ಪ್ರದೇಶವನ್ನು "ವಸತಿ" ಉದ್ದೇಶದ ಏಕ ನಿವೇಶನ ವಿನ್ಯಾಸವಾಗಿ ಅನುಮೋದಿಸಲಾಗಿದ್ದು, ಈ ನಿವೇಶನವನ್ನು ಉಪವಿಭಜನೆ ಮಾಡುವುದಾಗಲಿ, ನಿವೇಶನ ಅಳತೆಯನ್ನು ಮಾರ್ಪಾಡು ಮಾಡುವುದಾಗಲಿ ಮಾಡಕೂಡದು. ಒಂದು ವೇಳೆ ನಿವೇಶನವನ್ನು ಉಪವಿಭಜಿಸಬೇಕಾಗಿದ್ದಲ್ಲಿ ವಲಯ ನಿಯಮಾವಳಿಯನ್ವಯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಂತೆ ಈ ಕಛೇರಿಯ ಪೂರ್ವಾನುಮತಿ ಪಡೆಯತಕ್ಕದ್ದು.
2. ಅನುಮೋದಿತ 'ಏಕ ನಿವೇಶನ' ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
3. ವಿನ್ಯಾಸದಲ್ಲಿ "ವಸತಿ" ಕಟ್ಟಡ ನಿರ್ಮಾಣ ಪ್ರಾರಂಭಿಸುವ ಮುನ್ನ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 15 (1) ರಂತೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಪಡೆಯುವ ಷರತ್ತಿಗೊಳಪಟ್ಟಿರುತ್ತದೆ.
4. "ವಸತಿ" ಕಟ್ಟಡ ಇತ್ಯಾದಿ ಕಾಮಗಾರಿಯನ್ನು ಕೈಗೊಳ್ಳುವ ಮೊದಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಲ್ಲುಬಾಳು ಗ್ರಾಮಪಂಚಾಯ್ತಿ ರವರಿಂದ ಪರವಾನಗಿ (ಲೈಸೆನ್ಸ್) ಅನ್ನು ಪಡೆಯತಕ್ಕದ್ದು.
5. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ, ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.
6. ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
7. ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (Paved Footpath) ನಿರ್ಮಿಸುವುದು.
8. ನೀರು ಸರಬರಾಜು ವ್ಯವಸ್ಥೆಯ ಬಗ್ಗೆ ಆಗುವ ಅನಾನುಕೂಲಗಳ ಬಗ್ಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
9. ನಿಯಮಾವಳಿಯಂತೆ ಅವಶ್ಯಕವಿರುವ ಇತರೆ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆಯುವ ನಿಬಂಧನೆಗೊಳಪಟ್ಟಿರುತ್ತದೆ.

ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.

www.anekal.tpa.gov.in, www.e-vinyasa.kar.nic.in

10. ಅಗತ್ಯ ಅಭಿವೃದ್ಧಿ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಸ್ಥಳೀಯ ಸಂಸ್ಥೆಯಾದ ಕಲ್ಲುಬಾಳು ಗ್ರಾಮಪಂಚಾಯ್ತಿ ಇವರಿಗೆ ತಪ್ಪದೇ ಪಾವತಿಸತಕ್ಕದ್ದು.
11. "ವಸತಿ" ಉದ್ದೇಶದ 'ಏಕ ನಿವೇಶನ' ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ತಮ್ಮಿಂದ ಸಲ್ಲಿಸಲಾಗಿರುವ ಭೂಮಾಲೀಕತ್ವ ದಾಖಲೆ ಮತ್ತು ಇತರೆ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ಸುಳ್ಳಾಗಿದ್ದಲ್ಲಿ ಅಥವಾ ಪೋರ್ಜರಿಯಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೇ ತಾನಾಗಿ ರದ್ದುಗೊಳ್ಳುತ್ತದೆ ಎಂದು ಭಾವಿಸತಕ್ಕದ್ದು.
12. ಏಕ ನಿವೇಶನ ವಿನ್ಯಾಸ ನಕ್ಷೆಯಲ್ಲಿನ ಘನ ತ್ಯಾಜ್ಯಗಳನ್ನು ಪ್ಲಾಸ್ಟಿಕ್ ಮತ್ತು ಇತ್ಯಾದಿಯಾಗಿ ವಿಂಗಡಿಸಿ compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು.
13. ಸದರಿ ವಸತಿ ಏಕ ನಿವೇಶನ ನಕ್ಷೆಯಲ್ಲಿ ನಾಲಾ ಹಾದುಹೋಗಿದ್ದಲ್ಲಿ ಸದರಿ ನಾಲಾ ಜಾಗೆಯಲ್ಲಿ ಹಾದುಹೋಗುವ ರಸ್ತೆಗಳಿಗೆ ಸೇತುವೆ ನಿರ್ಮಾಣದ ಬಗ್ಗೆ ಸಂಬಂಧಿಸಿದ ಕಂದಾಯ ಇಲಾಖೆಯಿಂದ/ಇತರೆ ಇಲಾಖೆಯಿಂದ ಮಂಜೂರಾತಿ ಪಡೆದ ನಂತರವೇ ಕಾಮಗಾರಿಗಳನ್ನು ಪ್ರಾರಂಭಿಸತಕ್ಕದ್ದು.
14. ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಪ್ರಾಧಿಕಾರವು ವಿಧಿಸಿರುವ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

ಮೇಲಿನಂತೆ ನೀಡಲಾಗಿರುವ ಅನುಮೋದನೆಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರನ್ವಯ ಕ್ರಮ ತೆಗೆದುಕೊಳ್ಳಲಾಗುವುದು.

15.6.22

ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು
ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

**ಇವರಿಗೆ,**
**ಕಾರ್ಯಪಾಲಕ ಅಭಿಯಂತರರು,**
**ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ,**
# ಕಾವೇರಿ ಭವನ, 9ನೇ ಮಹಡಿ,
ಇ ಮತ್ತು ಎಫ್ ಬ್ಲಾಕ್, ಕೆಂಪೇಗೌಡ ರಸ್ತೆ,
ಬೆಂಗಳೂರು-560 009.